ಇ) ಸರ್ಕಾರವು ಈ ಸಮರ್ಪಣೆಗೆ ಅನುಮತಿ ಕೊಟ್ಟಿದೆಯೇ ?

ಈ) ಆ ತರಹ ದೇವದಾಸಿಗಳು ಪರಿಶಿಷ್ಟ ಜಾತಿ ಮತ್ತು ಇತರ ಜಾತಿಯಲ್ಲಿರುವರೆಷ್ಟು ಜನ ?

ಶ್ರೀ ಜೆ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ದೇವದಾಸಿಗಳಾಗಿ ಸಮರ್ಪಣೆಯಾಗಿದ್ದಾರೆಂಬ ವಿಷಯ ನಿಜವಲ್ಲ.

ಆ) ದೇವದಾಸಿಯಾಗಿ ಸಮರ್ಪಣೆ ಮಾಡುವುದನ್ನು ನಿಷೇಧಿಸಿರುವುದರಿಂದ ಸರ್ಕಾರದಲ್ಲಿ ಇದರ ಬಗ್ಗೆ ಮಾಹಿತಿಗಳು ಇರುವುದಿಲ್ಲ.

ಇ) ಇಲ್ಲ.

ಈ) ಮಾಹಿತಿ ಇಲ್ಲ.

ತುಂಗಾ ಅಣೆಕಟ್ಟಿಗೆ ನೀರು ನಿಯಂತ್ರಣ ಕವಾಟು ಜೋಡಿಸುವ ಬಗ್ಗೆ

೧೪೫೫. ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಸಮೀಪ ಗಾಜನೂರಿನಲ್ಲಿರುವ ತುಂಗಾ ಅಣೆಕಟ್ಟಿಗೆ ೪.೧೯ ಮೀ (೧೩.೭೫) ಎತ್ತರದ ನೀರು ನಿಯಂತ್ರಣ ಕವಾಟುಗಳನ್ನು ಜೋಡಿಸುವ ವಿಚಾರ ಅವರ ಮೂಲ ವಿನ್ಯಾಸದಲ್ಲಿ ಅಡಕವಾಗಿದ್ದುದು ನಿಜವಲ್ಲವೇ ?

ಆ) ನೀರು ನಿಯಂತ್ರಣ ಕವಾಟುಗಳನ್ನು ಜೋಡಿಸಲು ಈಗ ತಗಲುವ ಅಂದಾಜು ವೆಚ್ಚವೆಷ್ಟು ?

ಇ) ಈವರೆಗೂ ಈ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಈ) ಈಗಲಾದರು ಸರ್ಕಾರದವರು ಈ ಬಗ್ಗೆ ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ನಿಜವಲ್ಲ.

ಆ) ಅನ್ವೇಷಣಾ ಹಂತದಲ್ಲಿದೆ.

ಇ) ಮತ್ತು ಈ) ಅನ್ವೇಷಣೆ ಮುಗಿದು ತಾಂತ್ರಿಕ ಸಮಿತಿಯ ಮುಂದೆ ಯೋಜನಾ ವರದಿಯನ್ನು ಮಂಡಿಸಲಾಗುವುದು. ತಾಂತ್ರಿಕ ಸಮಿತಿಯ ಯೋಜನಾ ಮತ್ತು ಆರ್ಥಿಕ ಇಲಾಖೆಗಳ ಶಿಫಾರಸ್ಸಿನೊಡನೆ ಕೇಂದ್ರಕ್ಕೆ ಕಳುಹಿಸಲಾಗುವುದು.

ನೀರಾವರಿ ಇಲಾಖೆಗೆ ಇರುವ ಉಪ ವಿಭಾಗಗಳ ಕುರಿತು.

೧೨೦೭. ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿ ನೀರಾವರಿ ಇಲಾಖೆಗೆ ಇರುವ ಉಪವಿಭಾಗಗಳ ಸಂಖ್ಯೆ ಎಷ್ಟು ?

ಆ) ಪ್ರತಿ ಉಪ ವಿಭಾಗಗಳ ವ್ಯಾಪ್ತಿಯಲ್ಲಿ ಬರುವ ನೀರಾವರಿ ಕ್ಷೇತ್ರವೆಷ್ಟು ?

ಇ) ಹಾನಗಲ್ಲ ತಾಲ್ಲೂಕಿನಲ್ಲಿರುವ ನೀರಾವರಿ ಉಪವಿಭಾಗವನ್ನು ಜಿಲ್ಲಾ ಪರಿಷತ್ ವ್ಯಾಪ್ತಿಗೆ ತೆಗೆದುಕೊಂಡು ಉಪವಿಭಾಗ ಬದಲಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?